ಸಿವಿಲ್ ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ತೀರ್ಮಾನಿಸಲು ಸಂಬಂಧಪಟ್ಟವರಿಂದ ಪಡೆದುಕೊಳ್ಳಲಾಗಿದೆ ಎಂಬುದು ಗೋಚರವಾಗಿದೆ.

ಡೆಪ್ಯುಟಿ ಪೋಲೀಸ್ ಕಮೀಷನರ್, ಕಾನೂನು ಮತ್ತು ಸುವ್ಯವಸ್ಥೆ (ಪೂರ್ವ) ಬೆಂಗಳೂರು ಇವರು ದಿಡೀರ್ ತಪಾಸಣೆ ನಡೆಸಿದ ನಂತರ ಈ ಅಪರಾಧಿಗಳ ಕಾವಲಿನ ಜವಾಬ್ದಾರಿಯನ್ನು ಹೊತ್ತಿದ್ದ ದಳದವರ ನಿರ್ಲಕ್ಷತೆಗಾಗಿ ಕ್ರಮ ಕೈಗೊಳ್ಳಲು ಡೆಪ್ಯುಟಿ ಪೋಲೀಸ್ ಕಮೀಷನರ್, ನಗರ ಸಶಸ್ತ್ರ ಮೀಸಲು ಪಡೆಯವರಿಗೆ ವರದಿ ಕಳುಹಿಸಲಾಗಿದೆ.

ಇದನ್ನು ಆಧರಿಸಿ ಡೆಪ್ಯೂಟಿ ಪೋಲೀಸ್ ಕಮೀಷನರ್, ನಗರ ಸಶಸ್ತ್ರ ಮೀಸಲು ಪಡೆಯವರು ತನಿಖೆ ನಡೆಸುತ್ತಿದ್ದು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಮೇಲೆ ಆರೋಪ ಹೊರಿಸಲಿದ್ದಾರೆ.

ಈ ರೌಡಿಗಳ ವೈದ್ಯೋಪಚಾರ ನೋಡಿಕೊಳ್ಳುತ್ತಿದ್ದ ವೈದ್ಯಾಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿರ್ಧರಿಸಲು ಸೂಪರಿಂಟೆಂಡೆಂಟ್, ವಿಕ್ಟೋರಿಯಾ ಆಸ್ಪತ್ರೆಯವರನ್ನು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೇಳಲಾಗಿದೆ.

ಈ ವಿಚಾರಣಾ ಖೈದಿಗಳ ಮೇಲೆ ಕಡಿ ನಿಗಾವಣೆ ಇಟ್ಟಿದ್ದು ಮತ್ತು ಭದ್ರತಾ ವ್ಯವಸ್ಥೆಯನ್ನು ಬಿಗಿಗೊಳಿಸಿದ್ದರಿಂದ ಈ ತನಿಖಾ ಖೈದಿಗಳಿಗೆ ದೊರೆಯುವ ಸೌಲಭ್ಯಗಳು ನಿಂತು ಹೋಗಿದ್ದು ಅವರುಗಳು ಸ್ವತಃ ಆಸ್ಪತ್ರೆಯಿಂದ ಬಿಡುಗಡೆ ಮಾಡಿಕೊಂಡು ಸೆಂಟ್ರಲ್ ಜೈಲಿಗೆ ವಾಪಸ್ಸಾಗಿರುತ್ತಾರೆ.

(8) ವಿರಾಜಪೇಟೆ ಸರ್ಕಾರಿ ಹೆರಿಗೆ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕಿಯಾಗಿದ್ದ ಶ್ರೀಮತಿ ಇಂದಿರಾ ಅವರಿಗೆ ವೈದ್ಯಕೀಯ ವೆಚ್ಚ ಹಾಗೂ ರಜೆ ಮಂಜೂರು.

ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಅಧ್ಯಕ್ಷರೆ, 1985ರಲ್ಲಿ ವಿರಾಜಪೇಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರತರಾಗಿದ್ದಾಗಲೇ ಗಂಭೀರ ಅಪಘಾತಕ್ಕೊಳಗಾಗಿ ತೊಡೆಯ ಮೂಳೆ ಮುರಿದುಹೋದ ಶ್ರೀಮತಿ ಎಂ.ಜಿ. ಇಂದಿರಾ ಅವರು ಚಿಕಿತ್ಸೆಗಾಗಿ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಹೋದಾಗ ಅಲ್ಲಿ 'ಬೋನ್ ಸೆಟ್ಟರ್ಸ್' ಇಲ್ಲ ಎಂಬ ಕಾರಣದಿಂದ ಮಂಗಳೂರಿನ ವೆನ್‌ಲಾಕ್ ಸರಕಾರಿ ಆಸ್ಪತ್ರೆಗೆ ನಿರ್ದೇಶಿಸಲ್ಪಟ್ಟು ಅಲ್ಲಿಯೂ ಮುರಿದ ಎಲುಬು ಕೂಡಿಸುವ ತಜ್ಞರಿಲ್ಲದೆ ಮಂಗಳೂರಿನ ಖಾಸಗಿ ಕೆ.ಎಂ.ಸಿ. ಆಸ್ಪತ್ರೆಗೆ ನಿರ್ದೇಶಿಸಲ್ಪಟ್ಟು ಚಿಕಿತ್ಸೆ ಪಡೆದರು. ವೈದ್ಯಕೀಯ ರಜೆ ಹಾಗೂ ವೈದ್ಯಕೀಯ ವೆಚ್ಚದ ಮಂಜೂರಾತಿಗಾಗಿ ಸದರಿ ಅಧ್ಯಾಪಕಿಯವರು ಕೇಳಿಕೊಂಡಾಗ ಸರಕಾರಿ ಆಸ್ಪತ್ರೆಗಳ ದಾಖಲೆಗಳಲ್ಲಿ ಅಧ್ಯಾಪಕಿಯವರ ಹೆಸರು ದಾಖಲಾಗಿಲ್ಲವೆಂದು ಅವರಿಗೆ ಸಿಗಬೇಕಾದ ರಜೆ, ವೈದ್ಯಕೀಯ ವೆಚ್ಚ ಸಿಕ್ಕಿಲ್ಲ. ಆಸ್ಪತ್ರೆಯವರ ತಪ್ಪಿಗೆ ಅಧ್ಯಾಪಕಿ ಹೊಣೆಗಾರರಾಗುವುದು ಸರಿಯಲ್ಲ. ಅಪಘಾತವಾದ ವರ್ಷ ವಿರಾಜಪೇಟೆ, ಮಂಗಳೂರುಗಳಲ್ಲಿನ ಸರಕಾರಿ ಆಸ್ಪತ್ರೆಗಳಲ್ಲಿ 'ಬೋನ್ ಸೆಟ್ಟರ್ಸ್' ಇಲ್ಲವಾದ್ದರಿಂದ ಕೆ.ಎಂ.ಸಿ. ಆಸ್ಪತ್ರೆಗೆ ಹೋಗುವುದು ಅನಿವಾರ್ಯವಾಗಿತ್ತು. ಈ ವಿಚಾರ ಪರಿಗಣಿಸಿ ನೊಂದ ಅಧ್ಯಾಪಕಿಗೆ ನೆರವು ನೀಡುವುದು ಅವಶ್ಯವಾಗಿದೆ. ರಾಜ್ಯದ ಆಸ್ಪತ್ರೆಗಳಲ್ಲಿ ಎಲ್ಲಾ ಸೌಕರ್ಯಗಳಿದ್ದೂ ಚಿಕಿತ್ಸೆಗಾಗಿ ಮಂತ್ರಿಗಳು ಅಮೇರಿಕಕ್ಕೆ ಹೋದ ನಿದರ್ಶನ ಇದೆ. ಆದರೆ ಯಾವ ಸೌಲಭ್ಯವೂ ಸರ್ಕಾರಿ ಆಸ್ಪತ್ರೆಯಲ್ಲಿಲ್ಲದಾಗ ಖಾಸಗಿ ಆಸ್ಪತ್ರೆಗೆ ಹೋದುದಕ್ಕೆ ಈ ರೀತಿ ಶಿಕ್ಷೆ ಏಕೆ? ಈ ವಿಚಾರ ಪುನರ್‌ಪರಿಶೀಲಿಸಿ ವೈದ್ಯಕೀಯ ವೆಚ್ಚ ಹಾಗೂ ರಜೆ ಮಂಜೂರು ಮಾಡಲು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: (ಶಿಕ್ಷಣ ಸಚಿವರು) : ಶ್ರೀಮತಿ ಎಂ.ಜಿ. ಇಂದಿರಾರವರು ವಿರಾಜಪೇಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರತರಾಗಿದ್ದಾಗಲೇ ಅಪಘಾತಕ್ಕೆ ಒಳಗಾಗಿ ವೈದ್ಯಕೀಯ ವೆಚ್ಚದ ಬಿಲ್ಲು ರೂ 4567-82

ಪೈಸೆಗಳನ್ನು ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರಿಗೆ 18-11-85ರಲ್ಲಿ ಸಲ್ಲಿಸಿದ್ದರು. ಸದರಿ ಬಿಲ್ಲಿನ ಬಾಬ್ತು ರಶೀದಿಗಳಿಗೆ ಅಧಿಕೃತ ಸರ್ಕಾರಿ ವೈದ್ಯರಿಂದ ದೃಢೀಕರಿಸಿಕೊಂಡು ಬಿಲ್ಲನ್ನು ಸಲ್ಲಿಸುವಂತೆ ಕೋರಲು ಸದರಿ ಶಿಕ್ಷಕಿಯವರು ತಟಸ್ಥರಾಗಿದ್ದುದರಿಂದ ಬಿಲ್ಲುಗಳು ಮಂಜೂರಾತಿಯಾಗಿರುವುದಿಲ್ಲ. ಸದರಿ ಶಿಕ್ಷಕಿಯವರು ಒದಗಿಸಬೇಕಾದಂಥ ದಾಖಲೆಗಳನ್ನು ಒದಗಿಸಿದ ತಕ್ಷಣ ಸದರಿ ಬಿಲ್ಲುಗಳನ್ನು ಮಂಜೂರು ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸದರಿ ಶಿಕ್ಷಕಿಯವರಿಗೆ 7-2-85 ರಿಂದ 9-4-85ರ ತನಕ ವೈದ್ಯಕೀಯ ಪತ್ರದ ಆಧಾರದ ಮೇಲೆ ರಜೆಯನ್ನು ಮಂಜೂರು ಮಾಡಲಾಗಿದೆ.

(9) **ಬೆಂಗಳೂರಿನ ನಾಗೇಂದ್ರ ಬ್ಲಾಕ್, ಗೇರಹಳ್ಳಿ ಮತ್ತಿತರ ಬಡಾವಣೆಗಳನ್ನು ಬಸವನಗುಡಿ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿಸುವುದು.**

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ: ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಬನಶಂಕರಿ ಒಂದನೆಯ ಹಂತ ಹಾಗೂ ಮೂರನೇ ಹಂತಗಳಿಗೆ ಹೊಂದಿಕೊಂಡಿರುವಂತಹ, ಅದೇ ರೀತಿಯಲ್ಲಿ ಬಸವನಗುಡಿ ವಿಧಾನಸಭಾ ಕ್ಷೇತ್ರ ಹಾಗೂ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಹೊಂದಿಕೊಂಡಿರುವಂತಹ ನಾಗೇಂದ್ರ ಬ್ಲಾಕ್ ಮತ್ತು ಗೇರಹಳ್ಳಿ ಬಡಾವಣೆ ಹಾಗೂ ಶ್ರೀನಿವಾಸನಗರ ಬಡಾವಣೆಯ ಕೆಲವು ಭಾಗಗಳು, ಬೆಂಗಳೂರು ನಗರದ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಸೇರಿವೆ.

ಯಲಹಂಕ ವಿಧಾನಸಭಾ ಕ್ಷೇತ್ರಕ್ಕೂ ಈ ನಾಗೇಂದ್ರ ಬ್ಲಾಕ್, ಗೇರಹಳ್ಳಿ ಬಡಾವಣೆ, ಶ್ರೀನಿವಾಸನಗರದ ಕೆಲವು ಭಾಗಗಳಿಗೂ ಕೊಂಕಣ ಹಾಗೂ ಮೈಲಾರದ ಸಂಬಂಧ ಇದೆ. ಹೀಗಾಗಿ ಈ ಪಾಕೆಟ್ಸ್ ಏನಿವೆ ಇವು ಬಹಳ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು ಅಭಿವೃದ್ಧಿಯನ್ನು ಕಾಣುತ್ತಿಲ್ಲ. ಇದರಿಂದ ಈ ಭಾಗದ ಜನರಿಗೂ ತೊಂದರೆಯಾಗಿದೆ. ಅವರು ತಮ್ಮ ಶಾಸಕರನ್ನು ಕಾಣಬೇಕಾದರೆ ದೂರದ ಯಲಹಂಕಕ್ಕೆ ಹೋಗಬೇಗಾಗಿದೆ. ಅದಕಾರಣ ಮೇಲ್ಕಂಡ ಬಡಾವಣೆಗಳನ್ನು ಬಸವನಗುಡಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿಸಿದರೆ ಈ ಭಾಗದ ಜನರಿಗೆ ಹಾಗೂ ಮತದಾರರಿಗೆ ಬಹಳ ಅನುಕೂಲವಾಗುತ್ತದೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು, ಕ್ಷೇತ್ರದ ಪುನರ್‌ವಿಂಗಡಣೆ ಬಗ್ಗೆ ಚುನಾವಣಾ ಆಯೋಗಕ್ಕೆ ಶಿಫಾರಸ್ಸು ಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಗೇರಹಳ್ಳಿ, ನಾಗೇಂದ್ರ ಬ್ಲಾಕ್, ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ವ್ಯಾಪ್ತಿಗೆ ಸೇರಿದೆ.

1971ರ ಜನಗಣತಿ ಆಧಾರದಂತೆ ಭಾರತದ ಸೀಮಾ ವಿಂಗಡಣೆಯ ಆಯೋಗವು ಬೆಂಗಳೂರು ಮಹಾನಗರ ಸಭೆಯ ವ್ಯಾಪ್ತಿಗೆ ಬರುವ ಪ್ರದೇಶವನ್ನು 12 ವಿಧಾನಸಭಾ ಕ್ಷೇತ್ರಗಳನ್ನಾಗಿ ವಿಂಗಡಿಸಿದೆ. ಗೇರಹಳ್ಳಿಯು ಬೆಂಗಳೂರು ಮಹಾನಗರಸಭೆಯ ವ್ಯಾಪ್ತಿಗೆ ಬರುವುದಿಲ್ಲ. ಇದನ್ನು ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿಸಿ ಸದರಿ ಆಯೋಗವು ನಿರ್ಧರಿಸುವಂತೆ ಚುನಾವಣಾ ಆಯೋಗವು ಆದೇಶ ಹೊರಡಿಸಿದೆ.

ಭಾರತ ಸಂವಿಧಾನದ ಅನುಚ್ಛೇದ 82ರಂತೆ 2,000ನೇ ಇಸವಿಯ ನಂತರ ನಡೆಯುವ ಮೊದಲನೆ ಜನಗಣತಿಯ ಅಂಕಿ-ಅಂಶಗಳು ಪ್ರಕಟಣೆಯಾದ ನಂತರ ಸಂಸತ್ ನಿರ್ಧರಿಸುವಂತೆ, ಸೀಮಾ ವಿಂಗಡಣೆ ಮಾಡಬೇಕಾಗಿದೆ. ಆ ಸಂದರ್ಭದಲ್ಲಿ ಗೇರಹಳ್ಳಿಯ ವ್ಯಾಪ್ತಿಯಲ್ಲಿ ಬರುವ ನಾಗೇಂದ್ರ ಬ್ಲಾಕ್‌ನ್ನು ಬಸವನಗುಡಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿಸುವ ಬಗ್ಗೆ ಸೀಮಾ ವಿಂಗಡಣೆಯ ಆಯೋಗಕ್ಕೆ ಮನವಿಯನ್ನು ಸಲ್ಲಿಸಬೇಕಾಗುತ್ತದೆ.